

# ಖಾರ ತಿನ್ನುವ ಪೋರ



ಅಡುಗೆಯಲ್ಲಿ ಹಸಿ ಮೆಣಸಿನಕಾಯಿ ಸ್ವಲ್ಪ ಹೆಚ್ಚಾದರೆ ಸಾಕು, ಆ ಖಾರಕ್ಕೆ ನಮಗೆ ಕಣ್ಣು, ಮೂಗಿನಿಂದ ನೀರು ಸುರಿಯಲು ಆರಂಭವಾಗುತ್ತದೆ. ಆದರೆ ಬರೀ 20 ತಿಂಗಳ ಈ ಪುಟಾಣಿ ನಾಮನ್ ಅಮೀರ್‌ಗೆ ಖಾರದ ಹಸಿರು ಮೆಣಸಿನ ಕಾಯಿ ಸಿಹಿಯಾದ  ಕೇಕ್‌ನಂತೆ! ಬೇಯಿಸದ, ಹುರಿಯದ, ಕರಿಯದ ಖಾರವಾಗಿರುವ ಹಸಿ ಮೆಣಸನ್ನು ಪ್ರತೀ ಊಟಕ್ಕೂ ಮೊದಲು ಈತ ಬಲು ಖುಷಿಯಿಂದ ತಿನ್ನುತ್ತಾನಂತೆ!

ಹಸಿ ಮೆಣಸಿನಕಾಯಿ ಹೆಚ್ಚಿದ ಕೈಯಿಂದ ಚಿಕ್ಕ ಮಕ್ಕಳನ್ನು ಎತ್ತಿಕೊಂಡರೆ ಸಾಕು, ಅದರ ಉರಿ ಎಳೆ ಚರ್ಮಕ್ಕೆ ತಾಗಿ, ಅವು ಬೊಬ್ಬೆ ಇಡಲು ಪ್ರಾರಂಭಿಸುತ್ತವೆ. ಅಂತಹದ್ದರಲ್ಲಿ, ಪ್ಯಾಲೆಸ್ತೀನ್‌ನ ಈ ಪೋರನ ಕಥೆಯೇನಪ್ಪ.. ಎಂದು ಎಲ್ಲರಿಗೂ ವಂಡರ್! 14 ತಿಂಗಳ ಮಗು ಆಗಿದ್ದಾಗಿನಿಂದಲೇ ಈತ ಮೆಣಸಿನಕಾಯಿ ತಿನ್ನಲು ಶುರು ಮಾಡಿದನಂತೆ. ಈತನ ಪಾಲಕರಿಗೆ ಇದೊಂದು ಹೆಮ್ಮೆಯ ವಿಷಯ! ಇಷ್ಟು ಚಿಕ್ಕವಯಸ್ಸಿನಲ್ಲಿ ಅಷ್ಟೊಂದು ಖಾರ ತಿಂದರೂ ಆತನ ಆರೋಗ್ಯ ಚೆನ್ನಾಗಿಯೇ ಇದೆಯಂತೆ. ಸದ್ಯಕ್ಕೆ ಅತಿ ಚಿಕ್ಕ ವಯಸ್ಸಿನಲ್ಲಿಯೇ ಹೆಚ್ಚು ಖಾರ ತಿನ್ನುವ ಮಗು ಎಂಬುದು ಈ ಪೋರನ ಹೆಸರಿನಲ್ಲಿರುವ ವಿಶ್ವದಾಖಲೆ!

■ ವಿದ್ಯಾ ಹಾಲಭಾವಿ